# ಮಾಧ್ವರ ಏಕೈಕ ವೇದ ವಿದ್ಯಾಪೀಠಕ್ಕೆ ಸಜ್ಜನರ ಸಹಾಯದ ಅಗತ್ಯವಿದೆ.

ತಮಿಳು ನಾಡಿನ ಶ್ರೀರಂಗ ಕ್ಷೇತ್ರದಲ್ಲಿನ ಶ್ರೀ ವಿಜಯೀಂದ್ರಾಚಾರ್ಯರು ಮತ್ತು ಅವರ ತಮ್ಮ ಶ್ರೀ ಮಧುಸೂದನಾಚಾರ್ಯರು ವೇದ-ವೇದಾಂತಗಳನ್ನು ಅಧ್ಯಯನ ಮಾಡಿದ ಸಜ್ಜನ, ವಿನೀತ ವಿದ್ವಾಂಸರು.

ಮಾಧ್ವರಲ್ಲಿ ವೇದಗಳ ಪಾಠಶಾಲೆಯೇ ಇಲ್ಲದಂತಾಗಿರುವ ಈಗಿನ ಪರಿಸ್ಥಿತಿಯಲ್ಲಿ 48 ಜನ ವಿದ್ಯಾರ್ಥಿಗಳನ್ನಿಟ್ಟುಕೊಂಡು ವೇದಗಳ ಪಾಠವನ್ನು ಹೇಳುತ್ತಿದ್ದಾರೆ. ಈಗಾಗಲೇ ಹತ್ತಾರು ವೇದ ವಿದ್ವಾಂಸರನ್ನು ಸಿದ್ಧಪಡಿಸಿದ್ದಾರೆ ಸಹಿತ.

ಇಷ್ಟು ಜನ ವಿದ್ಯಾರ್ಥಿಗಳನ್ನು ಒಂದು ಬಾಡಿಗೆಯ ಮನೆಯಲ್ಲಿಟ್ಟುಕೊಂಡು ವೇದಪಾಠಗಳನ್ನು ಶಾಸ್ತ್ರಪಾಠಗಳನ್ನು ಹೇಳುತ್ತಿದ್ದಾರೆ. ಶ್ರೀರಂಗದ ಸಜ್ಜನ ಭಕ್ತರೊಬ್ಬರು  ಅರ್ಧ ಎಕರೆಯಷ್ಟು ಸ್ಥಳವನ್ನು ಸುಮಾರು 50 ಲಕ್ಷಕ್ಕೆ  (ಅಲ್ಲಿನ ಬೆಲೆಗಿಂತಲೂ ತುಂಬ ಕಡಿಮೆಯ ಬೆಲೆ ಅದು) ಖರೀದಿ ಮಾಡಲು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ.

ಈ ಇಬ್ಬರು ಸಾತ್ವಿಕ ಪಂಡಿತರು ಈಗ ಅಷ್ಟು ಹಣವನ್ನು ಹೊಂದಿಸಿಕೊಂಡು ಆ ಸ್ಥಳವನ್ನು ಖರೀದಿಸಬೇಕಾಗಿದೆ. ಹೀಗಾಗಿ ಭೂದಾನವನ್ನು ಮಾಡಲಿಚ್ಛಿಸುವ ಸಜ್ಜನರು ಅವರ ಖಾತೆಗೆ ಹಣವನ್ನು ಹಾಕಬಹುದು. ಅಥವಾ ಶ್ರೀರಂಗಕ್ಕೇ ಹೋಗಿ ಅಲ್ಲಿ ಅವರ ಗುರುಕುಲವನ್ನು ಕಂಡು ನೇರವಾಗಿ ದಾನವನ್ನು ಮಾಡಬಹುದು.

ನಾನು ಈ ಇಬ್ಬರು ವಿದ್ವಾಂಸರನ್ನು ಅನೇಕ ಬಾರಿ ಭೇಟಿಯಾಗಿದ್ದೇನೆ. ನಿಗರ್ವಿಗಳು ಮತ್ತು ಪ್ರಾಮಾಣಿಕ ಹರಿಗುರು ಭಕ್ತರು. ಸಜ್ಜನಿಕೆ ಮತ್ತು ಪ್ರಾಮಾಣಿಕತೆಗಳನ್ನು ಶ್ರೀಹರಿ ಅವರಿಗೆ ಸಮೃದ್ಧವಾಗಿ ಅನುಗ್ರಹಿಸಿದ್ದಾನೆ.

ಅಣ್ಣ ವಿಜಯೀಂದ್ರಾಚಾರ್ಯರು  ತಮ್ಮಲ್ಲಿರುವ ವಿದ್ಯಾರ್ಥಿಗಳಿಗೆ ಕೇವಲ ವೇದ ವಿದ್ಯೆಯಷ್ಟೇ ಅಲ್ಲ, ಆಚಾರ್ಯರ ಶಾಸ್ತ್ರವನ್ನೂ ಅಧ್ಯಯನ ಮಾಡಿಸಬೇಕೆಂಬ ದೃಷ್ಟಿಯಿಂದ ತಮ್ಮ ತಮ್ಮ ಮಧುಸೂದನಾಚಾರ್ಯರ ಉನ್ನತ ಶಾಸ್ತ್ರಾಭ್ಯಾಸಕ್ಕೆ ಅವಕಾಶ ನೀಡಿದ್ದಾರೆ. ಮಧುಸೂದನಾಚಾರ್ಯರು ನ್ಯಾಯಶಾಸ್ತ್ರ ಮತ್ತು ವೇದಾಂತಶಾಸ್ತ್ರಗಳಲ್ಲಿ ಶ್ರೇಷ್ಠ

ವಿದ್ವತ್ತನ್ನು ಗಳಿಸಿ ನಿರಂತರ ಅಧ್ಯಯನಶೀಲರಾಗಿ ಈಗ ಆ ಸಮಸ್ತ ವಿದ್ಯೆಯನ್ನು ತಮ್ಮ ಎಲ್ಲ ವಿದ್ಯಾರ್ಥಿಗಳಿಗೆ ಧಾರೆಯೆರುತ್ತಿದ್ದಾರೆ. ನಾನೇ ಖುದ್ದಾಗಿ  ಅವರ ವಿದ್ಯಾಪೀಠಕ್ಕೆ ಹೋಗಿ ಬಂದು ಅಲ್ಲಿನ ಪಾಠದ ಕ್ರಮ, ವಿದ್ಯಾರ್ಥಿಗಳನ್ನು ಮಕ್ಕಳಂತೆ ನೋಡಿಕೊಳ್ಳುವ ಅವರ ಕಾಳಜಿಯನ್ನು ಹತ್ತಿರದಿಂದ ಕಂಡು ಬಂದಿದ್ದೇನೆ. ಇವರಿಗೆ ನೀಡಿದರೆ ದೇವರು ಮೆಚ್ಚುತ್ತಾನೆ ಎನ್ನುವದನ್ನು ನಿಶ್ಚಯಿಸಿಕೊಂಡೇ ನಿಮಗೆಲ್ಲ ತಿಳಿಸುತ್ತಿದ್ದೇನೆ.

ಸ್ಕಂದಪುರಾಣದಲ್ಲಿ ಒಂದು ಮಾತಿದೆ —

**ಯಸ್ಯ ಕೋಷ್ಠಗತಂ ಚಾನ್ನಂ**
**ವೇದಾಭ್ಯಾಸೇನ ಜೀರ್ಯತಿ ।**
**ಸ ತಾರಯತಿ ದಾತಾರಂ**
**ದಶಪೂರ್ವಂ ದಶಾಪರಮ್ ।**

ಯಾವ ಬ್ರಾಹ್ಮಣನ ಹೊಟ್ಟೆ ಸೇರಿದ ಅನ್ನ ವೇದಗಳ ಅಧ್ಯಯನ ಅಧ್ಯಾಪನಗಳಿಂದ ಜೀರ್ಣವಾಗುತ್ತದೆಯೋ ಅಂತಹ ವೇದಾಭ್ಯಾಸಶೀಲನಾದ ಬ್ರಾಹ್ಮಣನಿಗೆ ಅನ್ನದಾನ

ಮಾಡುವ ಸಜ್ಜನನ ಹಿಂದಿನ ಹತ್ತು ತಲೆಯವರು ಮುಂದಿನ ಹತ್ತು ತಲೆಯವರು ಉದ್ಧಾರವಾಗುತ್ತಾರೆ.
ಶ್ರೀರಂಗಕ್ಷೇತ್ರಕ್ಕೆ ಹೋದಾಗ ಅವಶ್ಯವಾಗಿ ಈ ವಿದ್ಯಾಪೀಠಕ್ಕೆ ಭೇಟಿ ನೀಡಿ. ಅಲ್ಲಿನ ವಿದ್ಯಾರ್ಥಿಗಳ ಕಂಠದಿಂದ ಹೊರ ಹೊಮ್ಮಿ ಬರುತ್ತಿರುವ ವೇದದ ಸುಶ್ರಾವ್ಯ ನಾದವನ್ನು ಆಲಿಸಿ ಬನ್ನಿ. ಮನಸ್ಸು ಪ್ರಶಾಂತವಾಗುತ್ತದೆ. ಅಲ್ಲಿನ ಮಕ್ಕಳಿಗೆ ಯೋಗ್ಯವಾದ ಮಡಿಪಂಚೆ, ಪಂಚೆ, ಪುಸ್ತಕಗಳನ್ನು ದಾನ ಮಾಡಿ ಬನ್ನಿ. ತಿಂಗಳಿಗೆ ಸುಮಾರು ಎರಡು ಲಕ್ಷದವರೆಗೂ ಖರ್ಚಾಗುವ ನಿತ್ಯದ ಭೋಜನಕ್ಕೆ ನಿಮ್ಮ ಕೈಲಾದಷ್ಟನ್ನು ಸಮರ್ಪಿಸಿ ಬನ್ನಿ. ಶ್ರೀರಂಗನಾಥ ಅನುಗ್ರಹಿಸುತ್ತಾನೆ.

ಅಧರ್ಮ, ನಾಸ್ತಿಕತೆಗಳು, ಪಾಶ್ಚಾತ್ಯ ಸಂಸ್ಕೃತಿಯ ವಿಕೃತ ಪ್ರಭಾವ ಎಲ್ಲೆಡೆ ತಾಂಡವವಾಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ಪ್ರಾಚೀನ ಋಷಿಮುನಿಗಳು ನಮಗೆ  ನೀಡಿಹೋಗಿರುವ ವೇದವಿದ್ಯೆಯನ್ನು ಉಳಿಸಬೇಕಾದ್ದು ನಮ್ಮ ಸಮಾಜದ ಆದ್ಯಕರ್ತವ್ಯ. ಈ ಅಣ್ಣತಮ್ಮಂದಿರು ಆ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತು

ಸಾಗುತ್ತಿದ್ದಾರೆ. ಈಗಾಗಲೇ ಅನೇಕ ವೇದವಿದ್ವಾಂಸರನ್ನು ಸಿದ್ಧಪಡಿಸಿದ್ದಾರೆ, ಹಾಗೂ ನಿರಂತರವಾಗಿ ವೇದಗಳ ಉಳಿವಿನ ಕಾರ್ಯದಲ್ಲಿ ನಿಸ್ಪೃಹರಾಗಿ ತೊಡಗಿದ್ದಾರೆ. ಈ ವೇದ ವಿದ್ಯಾಪೀಠಕ್ಕೆ ಆವಶ್ಯಕವಾದದ್ದನ್ನು ನೀಡಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಈ ಅಣ್ಣತಮ್ಮಂದಿರು ನಡೆಸುತ್ತಿರುವ ತ್ರಯೀವಿದ್ಯಾ ಗುರುಕುಲವನ್ನು ಒಂದು ಟ್ರಸ್ಟನ್ನಾಗಿ ಮಾಡಿದ್ದಾರೆ. ಅದರ ಹೆಸರಿನಲ್ಲಿಯೇ ಖಾತೆಯಿದೆ.

ಅವರ ಖಾತೆ ಮತ್ತು ಸಂಪರ್ಕದ ಮಾಹಿತಿ —

Account Details

Account Name
**Sri Trayee Vidya Gurukulam**

Account Number
**31103744502**

Bank Name
**State Bank of India**

Branch
**Srirangam**

IFSC
**SBIN0001983**
Please do not forget to email the transaction details to

**email:** tvgurukulam@gmail.com
**website:** www.vedapeeta.com

**Pandit Vijayindracharya**
8098922388

**Pandit Madhusudanacharya**
7904735661

ದೇವರು ಗುರುಗಳು ನಿಮ್ಮೆಲ್ಲರನ್ನೂ ಸದಾ ಶಾಸ್ತ್ರ ಶ್ರವಣದಲ್ಲಿ ಆಸಕ್ತರನ್ನಾಗಿ ಮಾಡಲಿ, ನಮ್ಮ ಮಾಧ್ವಸಮಾಜದಲ್ಲಿ ಈ ರೀತಿಯ ಪರಿಶುದ್ಧ ಕ್ರಮದ ವೇದ-ವೇದಾಂತ ವಿದ್ಯಾಪೀಠಗಳು ಅಧಿಕವಾಗಿ ಬೆಳಯಲಿ, ಸನಾತನವಾದ ವೈದಿಕ ಧರ್ಮ ಉಳಿಯಲಿ ಎಂದು ಶ್ರೀಹರಿ ವಾಯು

ದೇವತಾ ಗುರುಗಳನ್ನು ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

ಅಧಿಕ ಜ್ಯೇಷ್ಠ ಕೃಷ್ಣ ನವಮಿ
ಹೇಮಲಂಬ

# The only Veda Vidyapeetha of Madhwas needs our support

Shri Vijayeendra Acharya and his brother Shri Madhusudhan Acharya are scholars residing in Tamil Nadu's Shri Ranga kshetra.  They are humble and kind souls who have studied the Vedas and Vedantas.

In this day and age where there are no Vedic schools in the Madhwa community, these scholars are teaching the Vedas to 48 disciples in their Vidyapeetha. Several Vedic scholars have already graduated from their school.

Incredibly - they are achieving all this out of a simple rented house! A well-wisher has found a half-acre parcel of

land for them in Sri Ranga and has helped negotiate the price to Rs.50 lakhs (which is much lesser than the market price).

Now, the brothers need to find a way to gather that amount and buy that land. For this noble cause, those of you who are interested in *bhoodaana* can consider contributing money. Or, even better, go to Sri Ranga, meet the brothers, see what they have accomplished and directly offer them your contribution as a *daana*.

I know these brothers from a long time. Both of them are humble and true Hari-Guru *bhaktas.* They have gained the respects of all learned people by virtue of their humility, scholarship and enthusiasm in spending the Vedic knowledge.

Shri Vijayeendra Acharya's vision was to not only teach his disciples the Vedas, but also *Madhwa Shaastra*. So, he encouraged  his brother to study *Nyaya Shaastra* and *Vedantha Shaastras* in depth. Shri Madusudhana Acharya is now disseminating that knowledge to all the disciples of the Vidyapeetha. I have visited their Vidyapeetha and witnessed their impressive approach to teaching. They treat the disciples like their own children, which is truly genuine and heart-warming. I am convinced that contributing to their cause is something that will truly please Sri Hari Vayu GurugaLu.

The SkandaPurana says:

यस्य कोष्ठगतमन्नं
वेदाभ्यासेन जीर्यति।

स तारयति दातारं
दशपूर्वं दशपारम्।

*Yasya koshtagatham chaannam*
*Vedabhyaasena jeeryathi |*
*Sa thaarayathi daatharam*
*Dashapoorvaan dashaaparaan*|

*Annadaana* to a Brahmin whose consumed food is essentially digested because of his studying the Vedas and Shaastras, will benefit 10 prior generations and 10 future generations of the giver.

Please do visit this Vidyapeetha whenever you go to Sri Ranga kshetra. Listen to the mesmerising chants of Vedic shlokas from the disciples there and surely your mind will be filled with peace. Consider providing essentials such as cloth [*madi-pancche*, *pancche]*

or books to the children there. The Vidyapeetha incurs a cost of Rs.2 lakhs every month just to feed the children – do contribute what you can to that as well. Sri Ranganatha will surely bestow his kindness on you.

In an environment made toxic by western influences, it is our duty to help protect the knowledge handed to us by our ancient sages. These siblings have taken it upon themselves to carry out this duty. They have already gifted the society with many Vedic scholars and are continually working to do more. I will say it again - It is our bounden duty to contribute what we can, to this cause.

They have created a trust for their Vidyapeetha - Sri Trayi Vidya Gurukula. They have a bank account

for this trust – please find the details of that account below:

| Account Details | |
|---|---|
| Account Name | **Sri Trayee Vidya Gurukulam** |
| Account Number | **31103744502** |
| Bank Name | **State Bank of India** |
| Branch | **Srirangam** |
| IFSC | **SBIN0001983** |
| Email | tvgurukulam@gmail.com |
| Website | www.vedapeeta.com |
| Pandit Vijayindracharya | 8098922388 |
| Pandit Madhusudanacharya | 7904735661 |

Please do not forget to email the transaction details to

May ShriHari and our *Guruparampare* bestow all of you with a constant zeal for listening to and learning the *Shaastras*. I humbly pray to *ShriHariVayuGurugalu* that many more such Vedic Vidyapeethas rise in our Madhwa community and help preserve our *Sanatana Vaidika Dharma.*

— Vishnudasa Nagendracharya
8-6-2018